ಗದಗ ಜಿಲ್ಲೆಯ ಶಹಪುರ್ ಪೇಟೆಯ ಬಸವೇಶ್ವರನಗರದ ವಿಶ್ವನಾಥ್ ಕಾಟವ ಕುಟಂಬ ಸಂಚರಿಸುತ್ತಿದ್ದ ಕಾರು ಅಪಘಾತಕ್ಕೆ ತುತ್ತಾಗಿದೆ. ಅದೃಷ್ಟವಷಾತ್ ಕಾರಿನಲ್ಲಿದ್ದವರು ಅಪಾಯದಿಂದ ಪಾರಾಗಿದ್ದಾರೆ.

ತುಮಕೂರಿನ ಶಾಲೆಯೊಂದರಲ್ಲಿ ವಿಶ್ವನಾಥ್ ಕಾಟವ ಅವರ ಪುತ್ರ ದಿವ್ಯತ್ವ ವ್ಯಾಸಂಗ ಮಾಡುತ್ತಿದ್ದಾರೆ. ಶಾಲೆಯಲ್ಲಿ ಗುರುವಾರ ಪಾಲಕರ ಸಭೆ ಕರೆದಿದ್ದ ಕಾರಣ ಸಹೋದರಿಯರಾದ ಪ್ರಿಯಾಂಕಾ, ಗಾಯತ್ರಿ ಜತೆ ಎಲ್ಲರೂ ತುಮಕೂರಿಗೆ ತೆರಳುತ್ತಿದ್ದರು. ಈ ವೇಳೆ ಚಿತ್ರದುರ್ಗದ ಗೋನೂರು ಸಮೀಪದ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಇವರ ಕಾರಿಗೆ ಮತ್ತೊಂದು ಕಾರು ಡಿಕ್ಕಿಯಾಗಿದೆ.

ಅಪಘಾತದಲ್ಲಿ ಗಾಯಗೊಂಡ ಗಾಯತ್ರಿ, ದಿವ್ಯತ್ವ ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲು ಹೊರಟ್ಟಿ ನೆರವಾಗಿದ್ದಾರೆ. ಸಣ್ಣಪುಟ್ಟ ಗಾಯಗಳಾಗಿದ್ದ ಕಾರಣ ತುರ್ತು ಚಕಿತ್ಸಾ ಘಟಕದಲ್ಲಿ ಚಿಕಿತ್ಸೆ ಪಡೆದು ತೆರಳಿದ್ದಾರೆ ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ರವೀಂದ್ರ ತಿಳಿಸಿದರು.

ಸಭಾಪತಿ ಬಸವರಾಜ ಹೊರಟ್ಟಿ ಅವರ ಮಾನವೀಯತೆ ಕಂಡು ಅಲ್ಲಿ ಸೇರಿದ ಜನ ಮೆಚ್ಚುಗೆ ವ್ಯಕ್ತಪಡಿಸಿದರು.